# 66th Dhammadeeksha Day

Dr. B.R. Ambedkar Research and Extension Centre,University of Mysore organized a special lecture on **66 years of Dhamma Deeksha walk: Progress and Challenges** on Friday, October 14th 2022. The special lecture was delivered by Prof. B. Ramesh, department of Social Work, Tumakur University. He expressed regret that contemporary political parties have confined Ambedkar's legacy to the erection of statues rather than implementing his visionary thoughts in governance.

The program was inaugurated by Prof. G. Hemanth Kumar, Hon'ble Vice Chancellor, University of Mysore, Mysuru. The program was presided over by Hon'ble Bhikkhu Lobsang Dorjee Paljore, Director of the Department of Translation at Seraje Monastic University, Bylukuppe.

DIRECTOR
Dr. B. R. Ambedkar
Research & Extension Centre
University of Mysore
Manasagangotri, Mysore-570 006

48



ಮೈಸೂರು ವಿಶ್ವವಿದ್ಯಾನಿಲಯ
ಡಾ. ಬಿ. ಆರ್. ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ
ಮಾನಸಗಂಗೋತ್ರಿ, ಮೈಸೂರು



# 66ನೇ ಧಮ್ಮದೀಕ್ಷಾ ದಿನಾಚರಣೆ

ದಿನಾಂಕ: 14-10-2022 ಶುಕ್ರವಾರ ಬೆಳಗ್ಗೆ 11.00ಕ್ಕೆ
ಸ್ಥಳ: ಪ್ರೊ. ಬೆಟ್ರಿಕ್ಸ್ ಡಿ' ಸೌಜ ಸಭಾಂಗಣ, ಡಾ. ಬಿ. ಆರ್. ಅಂಬೇಡ್ಕರ್ ಕೇಂದ್ರ
ಮಾನಸಗಂಗೋತ್ರಿ, ಮೈಸೂರು

**ಉದ್ಘಾಟನೆ**

**ಪ್ರೊ. ಜಿ. ಹೇಮಂತ ಕುಮಾರ್**
ಗೌರವಾನ್ವಿತ ಕುಲಪತಿಗಳು
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

**ವಿಶೇಷ ಉಪನ್ಯಾಸ**

**66 ವರ್ಷಗಳ ಧಮ್ಮದೀಕ್ಷಾ ನಡಿಗೆಯ ಪ್ರಗತಿ ಮತ್ತು ಸವಾಲುಗಳು**
**ಪ್ರೊ. ಬಿ. ರಮೇಶ್**
ಸಮಾಜಕಾರ್ಯ ಅಧ್ಯಯನ ಮತ್ತು ಸಂಶೋಧನ ವಿಭಾಗ
ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

**ಅಧ್ಯಕ್ಷತೆ**

**ಗೌರವಾನ್ವಿತ ಬಿಕ್ಕು ಲೋಬ್‌ಸಂಗ್ ದೋರ್‌ಜಿ ಪಾಲ್‌ಜೋರ್**
ನಿರ್ದೇಶಕರು
ಅನುವಾದ ವಿಭಾಗ
ಸೆರಾಜೆ ಮೊನಾಸ್ಟಿಕ್ ವಿಶ್ವವಿದ್ಯಾನಿಲಯ, ಬೈಲುಕುಪ್ಪೆ

**ಎಲ್ಲರಿಗೂ ಪ್ರೀತಿಯ ಸ್ವಾಗತ**

**ಡಾ. ಎಸ್. ನರೇಂದ್ರಕುಮಾರ್**
ನಿರ್ದೇಶಕರು
ಅಧ್ಯಾಪಕರು, ಅಧ್ಯಾಪಕೇತರರು, ಸಂಶೋಧಕರು ಹಾಗೂ ವಿದ್ಯಾರ್ಥಿಗಳು
ಡಾ. ಬಿ. ಆರ್. ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ
ಮಾನಸಗಂಗೋತ್ರಿ, ಮೈಸೂರು

ಮನುಷ್ಯನ ಉತ್ಕೃಷ್ಟ ಮನೋಭಾವದಿಂದ ಹೊರಹೊಮ್ಮುವ
ಪರಿಪೂರ್ಣ ನ್ಯಾಯವೇ ಬುದ್ಧನು ಬೋಧಿಸಿದ ಧಮ್ಮ
– ಬಾಬಾಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್

ದಿನಾಂಕ: 14-10-2022 ರಂದು [illegible]

'66ನೇ [illegible]" [illegible]

| ಕ್ರ.ಸಂ. | ಹೆಸರು | ಸಹಿ |
| --- | --- | --- |
| 1) | [illegible] | |
| 2) | [illegible] | |
| 3) | [illegible] | |
| 4) | [illegible] | |
| 5) | [illegible] | |
| 6) | [illegible] | |
| 7) | G.M. Basavaraju | |
| 8) | NAVEENA S M | |
| 9) | [illegible] | |
| 10) | N.R. MADHUSUDHAN | |
| 11) | Sanjay | |
| 12) | Rajesh | |
| 13) | Dr. Kumara Swamy C | |
| 14) | KIRAN | |
| 15) | SUDEEP.B | |
| 16) | Sachin. N | |

18) Yogesha M.N. — Yogesha M.N.

19) Nagabhushana P

20) MANUGOPAL S.G. MASTERS OF BUDDHIST STUDIES

21) Ravikumara K.S (Ist MA AMB) — ರವಿ

22) Ganesh.N

23) Siddaraju H.N — Siddaraju

24) Dr. Chandragupta

25) M. MAHESH ಮಹೇಶ

26) MAHESH.S budha studies

27) Mahadeppa S.M

28) Dr. Mahadevaswamy. R

29) Smitha. J

30) Gopalkrishna

31) Shashikumar

32) Sachin H.P

33) Naveenkumar G.R.

35) MANIKANTA (ABS)

36) MANIKANTA.K (ABS)

37) SIDDARAJU.

38) UMESHA

39) Prasad. N

40) Mahesha. C (IDS)

41) PRATHAP. M

42) Dr. PREMKUMAR.

43) DEEPUPRASAD. C Research scholar

44) Deepabuddha H.G. R.S

45) PRAMILA Rs.

46) Dr. Padmashree. T Faculty

47) DR. NINGAIAH. N Faculty

48) Sparsha R

Shreya M.

49) Dr. Mahesh sarah

50) ROHAN. J

51) LAKSHMIRANGAIAH. C.V Research...

52

52. Prakasha. S

53. P n Namadaiah

54. S. Gurulingaiah — S. Gurulingaiah

55) M. B. Jayashankar — 14/10/22

56) prof. R. Thimmarayappa. — R. Thimmarayappa.

57) ಅಲೆಮಾರಿ ಶರತ್. ಡಿ. — ಸಂಶೋಧನಾ ವಿದ್ಯಾರ್ಥಿ

58) SHIVAKUMARA. HR — Research Scholar

59) KALAVATHI. H.K — Research Assistant

60) ಡಾ. ಎಂ. ರಾಜಶೇಖರಪ್ಪ

61) Kisan - charan — AMBEDIKAR STUDIES.

62) Sunil Kumar. S — History (Research Scholar)

63) Lokesha. K — Ambedkar Studies — Lokesha

64) JEEVAN. B — I MA AMB

65) Vasantha kumar. K

66) K N. Shivalingaiah

67) Dr. Sreenivasa Murthy. M.

68] Sachin R.S — I MA [AMB] — Sachin R.S

I MA [Buddhist]

| | | | |
|---|---|---|---|
| 70). | SANTHOSH. S | I M.A [Buddha studies] | Santhosh. S |
| 71) | ANUSHA. M | I MA [English] | Anusha. M |
| 72) | Rochani. K. J | I MA [DOS in English] | [signature] |
| 73) | SIDDESH. C | Sri Basavdhwara College Tumkur. | Siddesh |
| 74) | Ashwini. D | Ist M.A [Ambedkar Studies] | [signature] |
| 75) | Akash. m | Ist MA (Ambedkar Studies) | [signature] |
| 76) | RAJESHA. S | —— " —— | [signature] |
| 77) | Gajendra Y. C. | IVth yr B.A.LLB. School of law. | [signature] |
| 78) | Sunil. C. J | —— " —— | [signature] |
| 79) | ROOPESH. N | I MA in DS (Development Studies) | Roopesh. N |
| 80) | Ashok kumar. B | Ist M.A (AMB) | Ashok kumar. B |
| 81) | Mamathashree C.M. | Ist. M.A. Buddhist | [signature] C.M |
| 82) | [illegible] | Ph.D | [signature] |
| 83) | YOGESH. K. B | Ph.D | [signature] |
| 84) | B. S. Chandrashekaran | Rtd Principal | [signature] |
| 85) | Kumarprabuddh | Ph.D | [signature] |
| 86) | Bhavyarani C | Employee | [signature] |

ಮೈಸೂರು ಮಿತ್ರ

ಶನಿವಾರ 15 ಅಕ್ಟೋಬರ್ 2022

# ಮನುಷ್ಯ ಸ್ವಾಭಿಮಾನದ ಬದುಕಿಗೆ ಬುದ್ಧ ತತ್ವ–ಸಿದ್ಧಾಂತ ಅನುಸರಿಸಬೇಕು

● ಮೈಸೂರು ವಿವಿ ಕುಲಪತಿ ಪ್ರೊ. ಜಿ.ಹೇಮಂತ್ ಕುಮಾರ್ ಅಭಿಮತ ● ಮೈಸೂರು ವಿವಿ ಡಾ.ಅಂಬೇಡ್ಕರ್ ಸಂಶೋಧನಾ ಸಂಸ್ಥೆಯಲ್ಲಿ '66ನೇ ಧಮ್ಮ ದೀಕ್ಷಾ ದಿನಾಚರಣೆ'

ಮೈಸೂರು, ಅ.14(ಎಂಟಿವೈ)– ಸ್ವಾಭಿಮಾನದಿಂದ ಬದುಕಬೇಕಾದರೆ ಬುದ್ಧನ ತತ್ವ–ಸಿದ್ಧಾಂತವನ್ನು ಅಪ್ಪಿಕೊಳ್ಳಬೇಕು. ಇವುಗಳನ್ನು ಇಂದಿನ ಯುವ ಪೀಳಿಗೆಗೆ ಅರ್ಥೈಸುವ ಅಗತ್ಯವಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಜಿ. ಹೇಮಂತ್‌ಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ಸಭಾಂಗಣದಲ್ಲಿ ಶುಕ್ರವಾರ ನಡೆದ '66ನೇ ಧಮ್ಮ ದೀಕ್ಷಾ ದಿನಾಚರಣೆ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬುದ್ಧ ಗುರುವನ್ನು ಯಾರು ಒಪ್ಪಿಕೊಳ್ಳುತ್ತಾರೋ ಅವರು ಪರಿಶುದ್ಧರಾಗಿರುತ್ತಾರೆ. ಅವರಿಗೆ ಭಯ, ಆಂತರಿಕ ಅಪಜಯ ಇರುವುದಿಲ್ಲ. ಬುದ್ಧಗುರುವಿನ ಅನುಯಾಯಿಗಳು ಸತ್ಯವಂತರೇ ಆಗಿರುತ್ತಾರೆ. ದುರ್ಬುದ್ಧಿ ಉಳ್ಳವರು, ದುರಾಸೆ ಉಳ್ಳವರು, ಜಾತಿವಾದಿಗಳಿಗೆ ಧಮ್ಮದಲ್ಲಿ ಸ್ಥಳವಿರುವುದಿಲ್ಲ. ಆದರೆ, ಧಮ್ಮ ಸ್ವೀಕರಿಸಿದ ಮೇಲೆ ದುರ್ಬುದ್ಧಿ ಉಳ್ಳವರಿಗೆ ತಮ್ಮ ತಪ್ಪಿನ ಅರಿವಾಗುತ್ತದೆ. ಹಾಗೆಯೇ ದುರಾಸೆ ಉಳ್ಳವರು ಧಮ್ಮ ಸ್ವೀಕರಿಸಿದರೆ, ಬದುಕಿನ



ಸತ್ಯವನ್ನು ಕಂಡುಕೊಳ್ಳುತ್ತಾರೆ. ಜಾತಿವಾದಿಗಳು ಧಮ್ಮಕ್ಕೆ ಶರಣಾದರೆ, ಮನುಷ್ಯರಾಗುತ್ತಾರೆ. ಇಂದು ಈ ದೇಶಕ್ಕೆ ಬುದ್ಧನ ಮಾರ್ಗ ಅನುಕರಣೆ ಮಾಡುವ ಅಗತ್ಯವಿದೆ. ಜಗತ್ತಿಗೆ ಬುದ್ಧ ಬೇಕು, ಯುದ್ಧವಲ್ಲ ಎಂಬ ಕವಿಯ ಸಂದೇಶವನ್ನು ಇಂದು ಅಂತರರಾಷ್ಟ್ರೀಯ ನಾಯಕರು ಅರಿತುಕೊಳ್ಳುವ ಅನಿವಾರ್ಯತೆ ಇದೆ ಎಂದರು.

ಬುದ್ಧನ ಪ್ರಜ್ಞೆ, ಕರುಣೆ, ನಮ್ಮ ಜೀವನದ ಭಾಗವಾಗಬೇಕು. ಬುದ್ಧನ ಕರುಣೆ ತತ್ವಗಳನ್ನು ನಾವು ಜೀವನದಲ್ಲಿ ಅಳವಡಿಸಿಕೊಳ್ಳುವುದು ಮಾತ್ರವಲ್ಲದೆ, ವಾಸಿಸುವ ಸ್ಥಳ, ಕಾರ್ಯ ನಿರ್ವಹಿಸುವ ಸ್ಥಳ, ಓಡಾಡುವ ಸ್ಥಳಗಳಲ್ಲಿ ಬಿತ್ತಬೇಕು. ಬುದ್ಧ ಗುರುವಿನ ತ್ರಿಸರಣ ತತ್ವವಾದ ಕಾಯಾ, ವಾಚಾ, ಮನಸ್ಸಾ ಸೂತ್ರವನ್ನು ಪಾಲಿಸೋಣ ಎಂಬ ಪ್ರತಿಜ್ಞೆ ಮಾಡಬೇಕು ಎಂದು ಸಲಹೆ ನೀಡಿದರು. ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ ಅವರು ಬುದ್ಧ ಗುರುವಿನ ಬಗ್ಗೆ 'ಮನುಷ್ಯನ ಉತ್ಕೃಷ್ಟ ಮನೋಭಾವದಿಂದ ಹೊರಹೊಮ್ಮುವ ಪರಿಪೂರ್ಣ ನ್ಯಾಯವೇ ಬುದ್ಧನು ಬೋಧಿಸಿದ ಧಮ್ಮ' ಎಂದು ಹೇಳಿರುವ ಮಾತು ಅರ್ಥಪೂರ್ಣವಾಗಿದೆ. ಡಾ.ಅಂಬೇಡ್ಕೇರ್ ಈ ಮಾತನ್ನು ಅರಿತು ಬಾಳೋಣ ಎಂದರು. ಮೈಸೂರು ವಿಶ್ವವಿದ್ಯಾನಿಲಯವು ಈಗಾಗಲೇ ಬೈಲಕುಪ್ಪೆಯ ಸೆರಾಜೆ ಮೊನಾಸ್ಟಿಕ್ ವಿಶ್ವವಿದ್ಯಾಲಯದೊಂದಿಗೆ ಒಡಂಬಡಿಕೆ ಮಾಡಿಕೊಂಡಿದೆ. ಮೈಸೂರು ವಿಶ್ವವಿದ್ಯಾನಿಲಯವು ಬೌದ್ಧ ಅಧ್ಯಯನದಲ್ಲಿ ಒಂದು ವಿಶೇಷ ಸ್ಥಾನವನ್ನು ಪಡೆದುಕೊಳ್ಳಲು ಶ್ರಮಿಸುತ್ತಿದೆ. ಅರಿಯಬೇಕಾದ ವಿಷಯವೆಂದರೆ ಓದು, ಬರಹ ನಮ್ಮನ್ನು ಬೆಳೆಸುತ್ತದೆ, ಉಳಿಸುತ್ತದೆ. ಚರಿತ್ರೆಯ ನಿರ್ಮಾಣವನ್ನು ಮಾಡುತ್ತದೆ. ಬಾಬಾಸಾಹೇಬರ ಜೀವನವೇ ಇದಕ್ಕೆ ಸಾಕ್ಷಿಯಾಗಿದೆ. ಇದೇ ವೇಳೆ ತುಮಕೂರು ವಿವಿ ಸಮಾಜ ಕಾರ್ಯ ಅಧ್ಯಯನ ವಿಭಾಗದ ಪ್ರೊ.ಬಿ.ರಮೇಶ್ ಅವರು, "66 ವರ್ಷಗಳ ಧಮ್ಮದೀಕ್ಷಾ ನಡಿಗೆಯ ಪ್ರಗತಿ ಮತ್ತು ಸವಾಲುಗಳು" ವಿಷಯದ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಬೈಲುಕುಪ್ಪೆ ಬಿಕ್ಕು ಲೋಬ್ ಸಂಗ್ ದೋರ್ ಜಿ ಪಾಲ್ ಜೋರ್, ಡಾ.ಎಸ್. ನರೇಂದ್ರಕುಮಾರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಶನಿವಾರ 15, ಅಕ್ಟೋಬರ್ 2022 ಪ್ರಜಾಸತ್ಯ

# ಮತಕ್ಕಾಗಿ ಅಂಬೇಡ್ಕರ್ ಸ್ಮರಣೆ ಅಪಾಯಕಾರಿ

## ಧಮ್ಮದೀಕ್ಷಾ ನಡಿಗೆ ಕಾರ್ಯಕ್ರಮದಲ್ಲಿ ಪ್ರೊ.ಬಿ.ರಮೇಶ್ ಕಳವಳ

▸▸ ಪ್ರಜಾಸತ್ಯ ವಾರ್ತೆ

**ಮೈಸೂರು:** ಇಂದಿನ ರಾಜಕೀಯ ಪಕ್ಷಗಳು ಅಂಬೇಡ್ಕರ್ ಅವರ ಚಿಂತನೆಗಳ ಆಧಾರದ ಮೇಲೆ ಆಳ್ವಿಕೆ ನಡೆಸದೇ ಕೇವಲ ಪ್ರತಿಮೆಗಳ ನಿರ್ಮಾಣಕ್ಕೆ ಮಾತ್ರ ಅಂಬೇಡ್ಕರ್‌ರನ್ನು ಸೀಮಿತಗೊಳಿಸಿದ್ದಾರೆ ಎಂದು ತುಮಕೂರು ವಿಶ್ವವಿದ್ಯಾನಿಲಯದ ಸಮಾಜ ಕಾರ್ಯ ವಿಭಾಗದ ಪ್ರಾಧ್ಯಾಪಕ ಬಿ.ರಮೇಶ್ ವಿಷಾದ ವ್ಯಕ್ತಪಡಿಸಿದರು.

ಮೈಸೂರು ವಿವಿ ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಮತ್ತು ವಿಸ್ತರಣಾ ಕೇಂದ್ರದ ವತಿಯಿಂದ ಆಯೋಜಿಸಿದ್ದ ಧಮ್ಮದೀಕ್ಷಾ ನಡಿಗೆಯ ಪ್ರಗತಿ ಮತ್ತು ಸವಾಲುಗಳು ಎಂಬ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಭಾರತಕ್ಕೆ ಸ್ವಾತಂತ್ರ್ಯ ಲಭಿಸಿ ಎಪ್ಪತ್ತೈದು ವರ್ಷಗಳು ಕಳೆದರೂ ಅಂಬೇಡ್ಕರ್ ಚಿಂತನೆಗಳು ಅನುಷ್ಟಾನಗೊಂಡಿಲ್ಲ. ದಲಿತರಿಗೆ ಇಂದಿಗೂ ಅಸ್ಪೃಶ್ಯತೆ ಆಚರಣೆಯಿಂದ ಮುಕ್ತಿ ದೊರೆತಿಲ್ಲ. ಕೋಲಾರ ಜಿಲ್ಲೆಯಲ್ಲಿ ದಲಿತ ಯುವಕನೊಬ್ಬ ದೇವರ ಕೋಲು ಮುಟ್ಟಿದ ಎಂಬ ಕಾರಣಕ್ಕೆ ಆತನ ಮೇಲೆ ಹಲ್ಲೆ ಮಾಡಿದ ಘಟನೆ ಇದಕ್ಕೆ ಸ್ಪಷ್ಟ ನಿದರ್ಶನ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ವಿದೇಶದಲ್ಲಿ ಅನುಭವಿಸಿದ ಸ್ವಾತಂತ್ರ್ಯವನ್ನು ಅಂಬೇಡ್ಕರ್ ತಮ್ಮ ದೇಶದಲ್ಲಿ ಅನುಭವಿಸಲು ಸಾಧ್ಯವಾಗಲಿಲ್ಲ. ಇಂದು ಇಡೀ ವಿಶ್ವವೇ ಅವರ ಸಾಧನೆ ಮತ್ತು ಹೋರಾಟ ಕಂಡು ತಮ್ಮ ಸಂಸತ್ ಭವನದಲ್ಲಿ, ರಾಜಕೀಯ ಕಚೇರಿಯಲ್ಲಿ ಅವರ ಪ್ರತಿಮೆಗಳನ್ನು ಅನಾವರಣಗೊಳಿಸಿದ್ದಾರೆ. ಆದರೆ ಭಾರತದಲ್ಲಿ ಕೇವಲ ಮತಬ್ಯಾಂಕಿಗಾಗಿ ಮಾತ್ರ ಅಂಬೇಡ್ಕರ್ ಅವರನ್ನು ತಮ್ಮ ಭಾಷಣದಲ್ಲಿ ಸ್ಮರಿಸುತ್ತಾರೆ ಎಂದ ಹೇಳಿದರು.




ಮೈಸೂರು ವಿವಿ ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಮತ್ತು ವಿಸ್ತರಣಾ ಕೇಂದ್ರದ ವತಿಯಿಂದ ಆಯೋಜಿಸಿದ್ದ ಧಮ್ಮದೀಕ್ಷಾ ನಡಿಗೆಯ ಪ್ರಗತಿ ಮತ್ತು ಸವಾಲುಗಳು ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕ ಬಿ.ರಮೇಶ್ ಮಾತನಾಡಿದರು.

2011 ಜನಗಣತಿಯ ಪ್ರಕಾರ ಅಧಿಕೃತವಾಗಿ ಹಿಂದೂ ಧರ್ಮದಿಂದ ಬೌದ್ಧ ಧರ್ಮಕ್ಕೆ ಮತಾತಂತಗೊಂಡವರ ಸಂಖ್ಯೆ ಸುಮಾರು 1 ಕೋಟಿ. ಆದರೇ ಎಲ್ಲಿಯೂ ನೊಂದಣಿ ಮಾಡಿಸದೇ ಬೌದ್ಧ ಧರ್ಮಕ್ಕೆ ಮತಾಂತಗೊಂಡವರ ಸಂಖ್ಯೆಯೂ ಒಂದು ಕೋಟಿ ಇದೆ. ಈ ಎಲ್ಲಾ ಜನರು ಹಿಂದೂ ಧರ್ಮ ಅಸ್ಪೃಶ್ಯತೆ ಆಚರಣೆಯಿಂದ ಬೇಸತ್ತು ಬುದ್ಧನ ಸಮಾನತೆಯ ನೆರಳಿನಲ್ಲಿ ಬದುಕುವ ಉದ್ದೇಶದಿಂದ ಮತಾಂತರಗೊಂಡಿದ್ದಾರೆ. ಇವರೆಲ್ಲರೂ ಮರಳಿ ತಮ್ಮ ಮನೆಗೆ ಹೊರಟಿರುವವರು ಎಂದು ಹೇಳಿದರು.

ಮೂರು ದುಂಡುಮೇಜಿನ ಸಮ್ಮೇಳನದಿಂದ ಪೂನಾ ಒಪ್ಪಂದದವರೆಗೂ ಅಂಬೇಡ್ಕರ್ ಶೋಷಿತ ಸಮುದಾಯಗಳಿಗೆ ನ್ಯಾಯಬದ್ಧವಾಗಿ ದೊರಕಬೇಕಾದ ಹಕ್ಕುಗಳಿಗಾಗಿ ತಮ್ಮ ಕಡೆಯ ದಿನದವರೆಗೂ ಹೋರಾಟ ಮಾಡಿದರು. ಇಂದಿನ ರಾಜಕೀಯ ಪಕ್ಷಗಳು ಅಧಿಕಾರದ ಆಸೆಗಾಗಿ ಚುನಾವಣೆ ಸಂದರ್ಭದಲ್ಲಿ ಮೀಸಲಾತಿಯ ಬಗ್ಗೆ ಮಾತನಾಡುತ್ತಾರೆ. ಆದರೆ ಅಸ್ಪೃಶ್ಯ ಸಮುದಾಯಗಳ ಮೇಲೆ ನಡೆಯುತ್ತಿರುವ ಜಾತಿ ಕ್ರೌರ್ಯದ ಬಗ್ಗೆ ಮಾತನಾಡುವುದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಅಂಬೇಡ್ಕರ್ ಹಿಂದೂ ಧರ್ಮದ ವರ್ಣಾಶ್ರಮ ಪದ್ಧತಿಗಳನ್ನು ವೈಜ್ಞಾನಿಕ ಅಧ್ಯಯನಕ್ಕೆ ಒಳಪಡಿಸಿ ಅದೇ ಶ್ರೇಷ್ಠ ಎಂದು ಬಿಂಬಿಸುವ ಜನರ ಮುಖವಾಡಗಳನ್ನು ಬಯಲು ಮಾಡಿದರು. ಬುದ್ಧನ ಕಾರುಣ್ಯ ಚಿಂತನೆಗಳಿಂದ ಪ್ರಭಾವಿತರಾಗಿದ್ದ ಅವರು ಭವಿಷ್ಯ ಭಾರತ ನಿರ್ಮಿಸುವ ಅಭಿಲಾಷೆ ಹೊಂದಿದ್ದರು. ಇಂದು ಯುದ್ಧದಲ್ಲಿ ತೊಡಗಿಕೊಂಡಿರುವ ದೇಶಗಳು ಬುದ್ಧನ ಕಡೆಯೊಮ್ಮೆ ನೋಡಬೇಕಿದೆ. ಯುದ್ಧದಿಂದ ಎಂತಹ ಘೋರ ಅನಾಹುತ ಸಂಭವಿಸುತ್ತವೆ ಎಂಬುದರ ಬಗ್ಗೆ ಬುದ್ಧ ಸಾವಿರಾರು ವರ್ಷಗಳ ಹಿಂದೆಯೇ ಮನವರಿಕೆ ಮಾಡಿಕೊಟ್ಟಿದ್ದಾನೆ ಎಂದು ಹೇಳಿದರು.

ಸಮಾಜದ ಮುಖ್ಯವಾಹಿನಿಯಲ್ಲಿ ಕೆಲಸ ಮಾಡುತ್ತಿರುವ ಬಲಪಂಥೀಯ ಪಕ್ಷಗಳು, ಎಡಪಂಥೀಯ ಪಕ್ಷಗಳು, ಮಹಿಳಾ ಸಂಘಟನೆಗಳು, ಕೆಲವು ದಲಿತ ಸಂಘಟನೆಗಳು ಕೇವಲ ಅಧಿಕಾರದ ಆಸೆಗಾಗಿ ಅಂಬೇಡ್ಕರ್ ಅವರ ಬಗ್ಗೆ ಮಾತನಾಡುತ್ತಿದ್ದಾರೆ. ಕೆಲವು ಬೆರಳೆಣಿಕೆಯಷ್ಟು ಸಂಘಟನೆಗಳು ಮಾತ್ರ ಅಂಬೇಡ್ಕರ್ ಅವರ ವಿಚಾರಗಳು ಘಸರಿಸಲು ಹೋರಾಟ ನಡೆಸುತ್ತಿದ್ದಾರೆ ಎಂದರು.

ಕುಲಪತಿ ಪ್ರೊ. ಜಿ ಹೇಮಂತ ಕುಮಾರ್, ವಿಭಾಗದ ಮುಖ್ಯಸ್ಥ ಡಾ.ಎಸ್ ನರೇಂದ್ರಕುಮಾರ್, ಸೆರಾಜೆ ಮೊನಾಸ್ಟಿಕ್ ವಿಶ್ವವಿದ್ಯಾನಿಲಯದ ಬಿಕ್ಕು ಲೋಬ್‌ಸಂಗ್ ದೋರ್‌ಐ ಪಾಲ್‌ಜೋರ್ ಪ್ರೊ.ಆರ್ ಇಂದಿರಾ, ಪ್ರೊ.ಜೆ ಸೋಮಶೇಖರ್ ಹಾಜರಿದ್ದರು.

ಪ್ರತಿನಿಧಿ
ಶನಿವಾರ, ಅಕ್ಟೋಬರ್ 15, 2022

# ಬುದ್ಧನ ತತ್ತ್ವ, ವಿಚಾರಧಾರೆಗಳನ್ನು ಬಿತ್ತಿ

## ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಸಲಹೆ

**ಪ್ರತಿನಿಧಿ ವರದಿ** ಮೈಸೂರು

ಬುದ್ಧನ ಕರುಣೆ ತತ್ತ್ವಗಳನ್ನು ನಾವು ಜೀವಿಸುವ ಸ್ಥಳಗಳಲ್ಲಿ, ಕಾರ್ಯ ನಿರ್ವಹಿಸುವ ಜಾಗಗಳಲ್ಲಿ ಮತ್ತು ಸಂಚರಿಸುವ ಸ್ಥಳಗಳಲ್ಲಿ ಬಿತ್ತಬೇಕು ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಜಿ. ಹೇಮಂತ್ ಕುಮಾರ್ ತಿಳಿಸಿದರು.

ಮಾನಸ ಗಂಗೋತ್ರಿಯ ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಮತ್ತು ವಿಸ್ತರಣಾ ಕೇಂದ್ರದ ವತಿಯಿಂದ ಆಯೋಜಿಸಿದ್ದ 66ನೇ ಧಮ್ಮದೀಕ್ಷಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ಬುದ್ಧಗುರುವಿನ ತ್ರಿಸರಣ ತತ್ವವನ್ನು ಕಾಯಾ, ವಾಚಾ, ಮನಸ್ಸಾ ಪಾಲಿಸೋಣ ಎಂಬ ಘೋಷಣೆಯನ್ನು ಕೈಗೊಳ್ಳೋಣ ಎಂದರು.

ಯಾರು ಬುದ್ಧಗುರುವನ್ನು ಒಪ್ಪಿಕೊಳ್ಳುತ್ತಾರೋ ಅವರು ಪರಿಶುದ್ಧರಾಗಿರುತ್ತಾರೆ. ಅವರಿಗೆ ಭಯ, ಆಂತರಿಕ ಅಪಜಯ ಇರುವುದಿಲ್ಲ. ಸತ್ಯವಂತರೆ ಬುದ್ಧಗುರುವಿನ ಅನುಯಾಯಿಗಳು. ದುರ್ಬುದ್ಧಿ ಉಳ್ಳವರು, ದುರಾಸೆ ಉಳ್ಳವರು, ಜಾತಿವಾದಿಗಳು ಇವರುಗಳಿಗೆ ಧಮ್ಮದಲ್ಲಿ ಸ್ಥಳವಿರುವುದಿಲ್ಲ ಎಂದು ಹೇಳಿದರು.



ಪ್ರತಿನಿಧಿ ಫೋಟೋ

ಮಾನಸ ಗಂಗೋತ್ರಿಯ ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಮತ್ತು ವಿಸ್ತರಣಾ ಕೇಂದ್ರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಮೈಸೂರು ವಿವಿ ಕುಲಪತಿ ಪ್ರೊ.ಜಿ. ಹೇಮಂತ್ ಕುಮಾರ್‌ಪುಷ್ಪಾರ್ಚನೆ ಮಾಡಿದರು.

ಆದರೆ, ಧಮ್ಮ ಸ್ವೀಕರಿಸಿದ ಮೇಲೆ ದುರ್ಬುದ್ಧಿ ಉಳ್ಳವರಿಗೆ ತಮ್ಮ ತಪ್ಪಿನ ಅರಿವಾಗುತ್ತದೆ. ಹಾಗೆಯೇ ದುರಾಸೆ ಉಳ್ಳವರು ಧಮ್ಮ ಸ್ವೀಕರಿಸಿದರೆ, ಬದುಕಿನ ಸತ್ಯವನ್ನು ಕಂಡುಕೊಳ್ಳುತ್ತಾರೆ. ಜಾತಿವಾದಿಗಳು ಧಮ್ಮಕ್ಕೆ ಶರಣಾದರೆ, ಮನುಷ್ಯರಾಗುತ್ತಾರೆ ಎಂದು ಹೇಳಿದರು.

ನಂತರ ತುಮಕೂರು ವಿಶ್ವವಿದ್ಯಾನಿಲಯದ ಸಮಾಜ ಕಾರ್ಯ ವಿಭಾಗದ ಪ್ರೊ.ಬಿ.ರಮೇಶ್ ಮಾತನಾಡಿ, ಇಂದಿನ ರಾಜಕೀಯ ಪಕ್ಷಗಳು ಅಂಬೇಡ್ಕರ್ ಅವರ ಚಿಂತನೆಗಳ ಆಧಾರದ ಮೇಲೆ ಆಳ್ವಿಕೆ ನಡೆಸದೇ ಕೇವಲ ಪ್ರತಿಮೆಗಳ ನಿರ್ಮಾಣಕ್ಕೆ ಮಾತ್ರ ಅಂಬೇಡ್ಕರ್ ಅವರನ್ನು ಸೀಮಿತಗೊಳಿಸಿದ್ದಾರೆ ಎಂದರು.

ಭಾರತಕ್ಕೆ ಸ್ವಾತಂತ್ರ್ಯ ಲಭಿಸಿ ಎಪ್ಪತ್ತೈದು ವರ್ಷಗಳು ಕಳೆದರೂ ದಲಿತರಿಗೆ ಮಾತ್ರ ಇಂದಿಗೂ ಅಸ್ಪೃಶ್ಯತೆ ಆಚರಣೆಯಿಂದ ಮುಕ್ತಿ ದೊರೆತಿಲ್ಲ. ಕೋಲಾರ ಜಿಲ್ಲೆಯಲ್ಲಿ ದಲಿತ ಯುವಕನೊಬ್ಬ ದೇವರ ಕೋಲು ಮುಟ್ಟಿದ ಎಂಬ ಕಾರಣಕ್ಕೆ ಆತನ ಮೇಲೆ ಹಲ್ಲೆ ಮಾಡಿದ ಘಟನೆ ಇದಕ್ಕೆ ಸ್ಪಷ್ಟ ನಿದರ್ಶನ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ವಿಭಾದ ಮುಖ್ಯಸ್ಥ ಡಾ.ಎಸ್ ನರೇಂದ್ರಕುಮಾರ್, ಬಿಕ್ಕು ಲೋಬ್ ಸಂಗ್ ದೋರ್ ಜಿ ಪಾಲ್ ಜೋರ್, ಪ್ರೊ. ಆರ್.ಇಂದಿರಾ, ಪ್ರೊ.ಜೆ.ಸೋಮಶೇಖರ್ ಇತರರು ಹಾಜರಿದ್ದರು.

2
ಉದಯವಾಣಿ ಬೆಂಗಳೂರು
ಶನಿವಾರ, ಅಕ್ಟೋಬರ್ 15, 2022

# ಬುದ್ಧನ ವಿಚಾರಧಾರೆ ಬದುಕಿನ ಭಾಗವಾಗಲಿ



**ಮಾನಸ ಗಂಗೋತ್ರಿಯ ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದಲ್ಲಿ ನಡೆದ 66ನೇ ಧಮ್ಮದೀಕ್ಷಾ ದಿನಾಚರಣೆಯಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಕುಲಪತಿ ಪ್ರೊ.ಜಿ. ಹೇಮಂತ್ ಕುಮಾರ್ ಪುಷ್ಪನಮನ ಸಲ್ಲಿಸಿದರು.**

**ಮೈಸೂರು:** ಬುದ್ಧನ ಪ್ರಜ್ಞೆ, ಕರುಣೆ, ಸಮತೆ ನಮ್ಮೆಲ್ಲರ ಬದುಕಿನ ಭಾಗವಾಗಬೇಕು ಎಂದು ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಜಿ. ಹೇಮಂತ್ ಕುಮಾರ್ ಅಭಿಪ್ರಾಯಪಟ್ಟರು.

ಮಾನಸ ಗಂಗೋತ್ರಿಯ ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದಲ್ಲಿ ನಡೆದ 66ನೇ ಧಮ್ಮದೀಕ್ಷಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ಬುದ್ಧನ ಕರುಣೆ ತತ್ವಗಳನ್ನು ನಾವು ಜೀವಿಸುವ ಸ್ಥಳಗಳಲ್ಲಿ, ಕಾರ್ಯ ನಿರ್ವಹಿಸುವ ಜಾಗಗಳಲ್ಲಿ ಮತ್ತು ಸಂಚರಿಸುವ ಸ್ಥಳಗಳಲ್ಲಿ ಬಿತ್ತಬೇಕು. ಬುದ್ಧಗುರುವಿನ ತ್ರಿಸರಣ ತತ್ವವನ್ನು ಕಾಯಾ, ವಾಚಾ, ಮನಸ್ಸಾ ಪಾಲಿಸೋಣ ಎಂಬ ಘೋಷಣೆಯನ್ನು ಕೈಗೊಳ್ಳೋಣ. ಅಂಬೇಡ್ಕರ್, ಬುದ್ಧಗುರುವನ್ನು ಕುರಿತು ಹೇಳಿದ ಮಾತು ಮನುಷ್ಯನ ಉತ್ಕೃಷ್ಟ ಮನೋಭಾವದಿಂದ ಹೊರಹೊಮ್ಮುವ ಪರಿಪೂರ್ಣ ನ್ಯಾಯವೇ ಬುದ್ಧನು ಬೋಧಿಸಿದ ಧಮ್ಮ ಎಂಬುದನ್ನು ಅರಿತು ಬಾಳೋಣ ಎಂದು ಹೇಳಿದರು.

ಮೈಸೂರು ವಿಶ್ವವಿದ್ಯಾನಿಲಯವು, ಬೈಲಕುಪ್ಪೆಯ ಸೆರಾಜೆ ಮೊನಾಸ್ಟಿಕ್ ವಿಶ್ವವಿದ್ಯಾಲಯದೊಂದಿಗೆ ಒಡಂಬಡಿಕೆಗಳನ್ನು ಇತ್ತೀಚೆಗೆ ಮಾಡಿಕೊಂಡಿದೆ. ಮೈಸೂರು ವಿಶ್ವವಿದ್ಯಾನಿಲಯವು ಬೌದ್ಧ ಅಧ್ಯಯನದಲ್ಲಿ ಒಂದು ವಿಶೇಷ ಸ್ಥಾನವನ್ನು ಪಡೆದುಕೊಳ್ಳಲು ಶ್ರಮಿಸುತ್ತಿದೆ. ನಾವೆಲ್ಲರೂ ಇಲ್ಲಿ, ಅರಿಯಬೇಕಾದ ವಿಷಯವೆಂದರೆ ಓದು, ಬರಹ ನಮ್ಮನ್ನು ಬೆಳೆಸುತ್ತದೆ, ಉಳಿಸುತ್ತದೆ. ಚರಿತ್ರೆಯ ನಿರ್ಮಾಣವನ್ನು ಮಾಡುತ್ತದೆ. ಬಾಬಾಸಾಹೇಬರ ಜೀವನವೇ ಇದಕ್ಕೆ ಸಾಕ್ಷಿಯಾಗಿದೆ. ಯಾರಿಗೆ ಸ್ವಾಭಿಮಾನದ ಬದುಕು ಬೇಕೋ ಅವರು ಬುದ್ಧವನ್ನು ಅಪ್ಪಿಕೊಳ್ಳಬೇಕು. ಬುದ್ಧನ ಚಿಂತನೆಗಳನ್ನು, ಮಾರ್ಗಗಳನ್ನು ಇಂದಿನ ಯುವ ಪೀಳಿಗೆಗೆ ಅರ್ಥೈಸುವ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ ಎಂದರು.

ತುಮಕೂರು ವಿವಿ ಸಮಾಜಕಾರ್ಯ ಅಧ್ಯಯನ ವಿಭಾಗದ ಪ್ರೊ.ಬಿ. ರಮೇಶ್, ಬೈಲುಕುಪ್ಪೆ ಬಿಕ್ಕು ಲೋಬ್ ಸಂಗ್ ದೋರ್ ಜಿ ಪಾಲ್ ಜೋರ್, ಡಾ.ಎಸ್. ನರೇಂದ್ರ ಕುಮಾರ್ ಇದ್ದರು.

## ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಅಭಿಪ್ರಾಯ

# ದೇಶಕ್ಕೆ ಬುದ್ಧನ ಮಾರ್ಗ ಅಗತ್ಯ

■ ವಿಜಯವಾಣಿ ಸುದ್ದಿಜಾಲ ಮೈಸೂರು

ಸ್ವಾಭಿಮಾನದ ಬದುಕು ಬೇಕಾದವರು ಬುದ್ಧನನ್ನು ಅಪ್ಪಿಕೊಳ್ಳಬೇಕೆಂದು ಮೈಸೂರು ವಿಶ್ವವಿದ್ಯಾಲಯ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಅಭಿಪ್ರಾಯಪಟ್ಟರು.

ಮಾನಸಗಂಗೋತ್ರಿಯ ಡಾ.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದಲ್ಲಿ ಶುಕ್ರವಾರ ಆಯೋಜಿಸಿದ್ದ 66ನೇ ಧಮ್ಮದೀಕ್ಷಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಹಿಂದು ಆಗಿ ಜನಿಸಿದೆ. ಆದರೆ, ಹಿಂದು ಆಗಿ ಸಾಯಲಾರೆ ಎಂದು ಡಾ.ಅಂಬೇಡ್ಕರ್ ಹೇಳಿದ್ದಕ್ಕೆ ಈ ಸಮಾಜವೇ ಕಾರಣ. ಅವರ ಚಿಂತನೆಗಳು, ಮಾರ್ಗಗಳನ್ನು ಯುವ ಪೀಳಿಗೆ ಅರ್ಥೈಸಿಕೊಂಡು ಜೀವನದಲ್ಲಿ ಅಳವಡಿಸಿಕೊಳ್ಳಬೇಕಿದೆ ಎಂದು ಸಲಹೆ ನೀಡಿದರು.

ದಿಗ್ವಿಜಯ 24X7 NEWS
ಎಲೆಕ್ಷನ್ ಫೀವರ್
ಪೊಲಿಟಿಕಲ್ ಪವರ್
ಜಿಲ್ಲಾ War
ದಿ ಎಲೆಕ್ಷನ್ War Room
ಪ್ರತಿದಿನ ಸಂಜೆ 5.57ಕ್ಕೆ

ದೇಶಕ್ಕೆ ಬುದ್ಧನ ಮಾರ್ಗದ ಅಗತ್ಯವಿದೆ. ಬುದ್ಧ ಜಗತ್ತಿನ ಬೆಳಕು. ಆ ಗುರುವನ್ನು ಒಪ್ಪುವವರು ಪರಿಶುದ್ಧವಾಗುತ್ತಾರೆ. ಅವರಿಗೆ ಭಯ, ಆಂತರಿಕ ಅಪಜಯ ಇರಲ್ಲ. ಬುದ್ಧನ ಪ್ರಜ್ಞೆ, ಕರುಣೆ, ಸಮತೆ ಬದುಕಿನ ಭಾಗವಾಗಬೇಕು. ನಾವು ಜೀವಿಸುವ, ಕಾರ್ಯನಿರ್ವಹಿಸುವ ಹಾಗೂ ಸಂಚರಿಸುವ ಸ್ಥಳಗಳಲ್ಲಿ ಬುದ್ಧನ ಕರುಣೆ ಪಸರಿಸಬೇಕು. ಮನುಷ್ಯನ ಉತ್ಕೃಷ್ಟ ಮನೋಭಾವದಿಂದ ಹೊರಹೊಮ್ಮುವ ಪರಿಪೂರ್ಣ ನ್ಯಾಯವೇ ಬುದ್ಧ ಬೋಧಿಸಿದ ಧಮ್ಮ ಎಂಬ ಅಂಬೇಡ್ಕರ್ ಮಾತು ಅರಿತು ಜೀವಿಸಬೇಕಾಗಿದೆ ಎಂದರು.

ದುರ್ಬುದ್ಧಿ, ದುರಾಸೆ ಉಳ್ಳವರು ಮತ್ತು ಜಾತಿವಾದಿಗಳಿಗೆ ಬುದ್ಧನ ಧರ್ಮದಲ್ಲಿ ಅವಕಾಶವಿಲ್ಲ. ಧಮ್ಮ ಸ್ವೀಕರಿಸಿದ ಮೇಲೆ ದುರ್ಬುದ್ಧಿ ಉಳ್ಳವರಿಗೆ ತಮ್ಮ ತಪ್ಪಿನ ಅರಿವಾಗುತ್ತದೆ. ದುರಾಸೆ ಉಳ್ಳವರು ಬದುಕಿನ ಸತ್ಯವನ್ನು ಕಂಡುಕೊಳ್ಳುತ್ತಾರೆ. ಜಾತಿವಾದಿಗಳು ಧಮ್ಮಕ್ಕೆ ಶರಣಾದರೆ ಮನುಷ್ಯರಾಗುತ್ತಾರೆ ಎಂದು ಹೇಳಿದರು.

ಮೈಸೂರು ವಿಶ್ವವಿದ್ಯಾಲಯವು ಬೈಲಕುಪ್ಪೆಯ ಸೆರಾಜೆ ಮೊನಾಸ್ಟಿಕ್ ವಿಶ್ವವಿದ್ಯಾಲಯದೊಂದಿಗೆ ಒಡಂಬಡಿಕೆ ಮಾಡಿಕೊಂಡಿದೆ. ಬುದ್ಧ ಅಧ್ಯಯನ ಕೇಂದ್ರದ ಚಟುವಟಿಕೆಗಳು ಆರಂಭವಾಗಿದ್ದು, ಕೇಂದ್ರಕ್ಕೆ 10 ಕೋಟಿ ರೂ. ವಿಶೇಷ ಅನುದಾನ ಕಲ್ಪಿಸುವಂತೆ ಸಂಸದ ವಿ.ಶ್ರೀನಿವಾಸಪ್ರಸಾದ್ ಈಚೆಗೆ ಮೈಸೂರಿಗೆ ಭೇಟಿ ನೀಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಕೋರಿದ್ದಾರೆ. ಮುಂದಿನ ದಿನಗಳಲ್ಲಿ ಬೌದ್ಧ ಅಧ್ಯಯನದಲ್ಲಿ ಮೈಸೂರು ವಿಶ್ವವಿದ್ಯಾಲಯವು ವಿಶೇಷ ಸ್ಥಾನ ಗಳಿಸಲಿದೆ ಎಂದರು.

ತುಮಕೂರು ವಿಶ್ವವಿದ್ಯಾಲಯದ ಸಮಾಜಕಾರ್ಯ ಅಧ್ಯಯನ ಹಾಗೂ ಸಂಶೋಧನಾ ವಿಭಾಗದ ಪ್ರೊ.ಬಿ.ರಮೇಶ್ ಅವರು '66 ವರ್ಷಗಳ ಧಮ್ಮದೀಕ್ಷಾ ನಡಿಗೆಯ ಪ್ರಗತಿ ಮತ್ತು ಸವಾಲುಗಳು' ಕುರಿತು ಮಾತನಾಡಿದರು. ಬೈಲುಕುಪ್ಪೆಯ ಸೆರಾಜೆ ಮೊನಾಸ್ಟಿಕ್ ವಿಶ್ವವಿದ್ಯಾಲಯದ ಅನುವಾದ ವಿಭಾಗದ ನಿರ್ದೇಶಕ, ಬಿಕ್ಕು ಲೋಬ್‌ಸಂಗ್ ದೋರ್‌ಜಿ ಪಾಲ್‌ಜೋರ್, ಡಾ.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ನಿರ್ದೇಶಕ ಡಾ.ಎಸ್. ನರೇಂದ್ರಕುಮಾರ್ ಪಾಲ್ಗೊಂಡಿದ್ದರು.

ವಿಜಯವಾಣಿ ಚಿತ್ರ



ಮಾನಸಗಂಗೋತ್ರಿಯಲ್ಲಿ ಶುಕ್ರವಾರ ಆಯೋಜಿಸಿದ್ದ 66ನೇ ಧಮ್ಮದೀಕ್ಷಾ ದಿನಾಚರಣೆ ಕಾರ್ಯಕ್ರಮವನ್ನು ಮೈವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಉದ್ಘಾಟಿಸಿದರು. ಪ್ರೊ.ಬಿ.ರಮೇಶ್, ಬಿಕ್ಕು ಲೋಬ್‌ಸಂಗ್ ದೋರ್‌ಜಿ ಪಾಲ್ ಜೋರ್, ಡಾ.ಎಸ್. ನರೇಂದ್ರಕುಮಾರ್ ಇದ್ದರು.

ಕನ್ನಡಪ್ರಭ
ಶನಿವಾರ 15.10.2022

# ಸ್ವಾಭಿಮಾನದ ಬದುಕಿಗಾಗಿ ಬುದ್ಧನನ್ನು ಅಪ್ಪಿಕೊಳ್ಳಿ

## ಮೈಸೂರು ವಿವಿ ಕುಲಪತಿ ಪ್ರೊ.ಜಿ. ಹೇಮಂತಕುಮಾರ್ ಸಲಹೆ

• **ಕನ್ನಡಪ್ರಭ ವಾರ್ತೆ** ಮೈಸೂರು

ಯಾರಿಗೆ ಸ್ವಾಭಿಮಾನದ ಬದುಕು ಬೇಕೋ ಅವರು ಬುದ್ಧನನ್ನು ಅಪ್ಪಿಕೊಳ್ಳಬೇಕು. ಬುದ್ಧನ ಪ್ರಜ್ಞೆ, ಕರುಣೆ, ಸಮತೆ ನಮ್ಮೆಲ್ಲರ ಬದುಕಿನ ಭಾಗವಾಗಬೇಕು ಎಂದು ಮೈಸೂರು ವಿವಿ ಕುಲಪತಿ ಪ್ರೊ.ಜಿ. ಹೇಮಂತಕುಮಾರ್ ತಿಳಿಸಿದರು.

ಮಾನಸಗಂಗೋತ್ರಿಯ ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ಪ್ರೊ. ಬೆಟ್ರಿಕ್ಸ್ ಡಿಸೋಜ ಸಭಾಂಗಣದಲ್ಲಿ ಶುಕ್ರವಾರ ನಡೆದ 66ನೇ ಧಮ್ಮದೀಕ್ಷಾ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಬುದ್ಧನ ಚಿಂತನೆಗಳನ್ನು, ಮಾರ್ಗಗಳನ್ನು ಇಂದಿನ ಯುವ ಪೀಳಿಗೆಗೆ ಅರ್ಥೈಸುವ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ ಎಂದರು.

ಯಾರು ಬುದ್ಧನನ್ನು ಒಪ್ಪಿಕೊಳ್ಳುತ್ತಾರೋ ಅವರು ಪರಿಶುದ್ಧರಾಗಿರುತ್ತಾರೆ. ಅವರಿಗೆ ಭಯ, ಆಂತರಿಕ ಅಪಜಯ ಇರುವುದಿಲ್ಲ. ದುರ್ಬುದ್ಧಿ ಉಳ್ಳವರು, ದುರಾಸೆ ಉಳ್ಳವರು, ಜಾತಿವಾದಿಗಳಿಗೆ ಧಮ್ಮದಲ್ಲಿ ಸ್ಥಳವಿರುವುದಿಲ್ಲ. ಆದರೆ, ಧಮ್ಮ ಸ್ವೀಕರಿಸಿದ ಮೇಲೆ ದುರ್ಬುದ್ಧಿ ಉಳ್ಳವರಿಗೆ ತಮ್ಮ ತಪ್ಪಿನ ಅರಿವಾಗುತ್ತದೆ. ಹಾಗೆಯೇ ದುರಾಸೆ ಉಳ್ಳವರು ಧಮ್ಮ ಸ್ವೀಕರಿಸಿದರೆ, ಬದುಕಿನ ಸತ್ಯವನ್ನು ಕಂಡುಕೊಳ್ಳುತ್ತಾರೆ. ಜಾತಿವಾದಿಗಳು ಧಮ್ಮಕ್ಕೆ ಶರಣಾದರೆ, ಮನುಷ್ಯರಾಗುತ್ತಾರೆ. ಇಂದು ಈ ದೇಶಕ್ಕೆ ಬುದ್ಧನ ಮಾರ್ಗ ಬೇಕಿದೆ ಎಂದು ಅವರು ಹೇಳಿದರು.



ಮೈಸೂರು ವಿವಿ ಮಾನಸಗಂಗೋತ್ರಿಯ ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದಲ್ಲಿ ಶುಕ್ರವಾರ ನಡೆದ 66ನೇ ಧಮ್ಮದೀಕ್ಷಾ ದಿನಾಚರಣೆಯಲ್ಲಿ ಡಾ. ಅಂಬೇಡ್ಕರ್ ಭಾವಚಿತ್ರಕ್ಕೆ ಕುಲಪತಿ ಪ್ರೊ.ಜಿ. ಹೇಮಂತಕುಮಾರ್ ಪುಷ್ಪನಮನ ಸಲ್ಲಿಸಿದರು. ಪ್ರೊ.ಬಿ. ರಮೇಶ್, ಲೋಬ್‌ಸಂಗ್ ದೋರ್‌ಐ ಪಾಲ್‌ಜೋರ್, ಡಾ.ಎಸ್. ನರೇಂದ್ರಕುಮಾರ್ ಇದ್ದರು.

ಬುದ್ಧನ ಕರುಣೆ ತತ್ವಗಳನ್ನು ನಾವು ಜೀವಿಸುವ ಸ್ಥಳಗಳಲ್ಲಿ, ಕಾರ್ಯ ನಿರ್ವಹಿಸುವ ಜಾಗಗಳಲ್ಲಿ ಮತ್ತು ಸಂಚರಿಸುವ ಸ್ಥಳಗಳಲ್ಲಿ ಬಿತ್ತಬೇಕು. ಬುದ್ಧನ ತ್ರಿಸರಣ ತತ್ವವನ್ನು ಕಾಯಾ, ವಾಚಾ, ಮನಸ್ಸಾ ಪಾಲಿಸೋಣ ಎಂದು ಅವರು ಕರೆ ನೀಡಿದರು.

ಮೈಸೂರು ವಿವಿ ಬೈಲಕುಪ್ಪೆಯ ಸೆರಾಜೆ ಮೊನಾಸ್ಟಿಕ್ ವಿವಿಜೊತೆಗೆ ಒಡಂಬಡಿಕೆಗಳನ್ನು ಇತ್ತೀಚೆಗೆ ಮಾಡಿಕೊಂಡಿದೆ. ಮೈಸೂರು ವಿವಿ ಬೌದ್ಧ ಅಧ್ಯಯನದಲ್ಲಿ ಒಂದು ವಿಶೇಷ ಸ್ಥಾನವನ್ನು ಪಡೆದುಕೊಳ್ಳಲು ಶ್ರಮಿಸುತ್ತಿದೆ. ಓದು- ಬರಹವು ನಮ್ಮನ್ನು ಬೆಳೆಸುತ್ತದೆ, ಉಳಿಸುತ್ತದೆ. ಚರಿತ್ರೆಯ ನಿರ್ಮಾಣವನ್ನು ಮಾಡುತ್ತದೆ. ಇದಕ್ಕೆ ಡಾ. ಅಂಬೇಡ್ಕರ್ ಜೀವನವೇ ಸಾಕ್ಷಿ ಎಂದರು.

ಇದೇ ವೇಳೆ 66 ವರ್ಷಗಳ ಧಮ್ಮದೀಕ್ಷಾ ನಡಿಗೆಯ ಪ್ರಗತಿ ಮತ್ತು ಸವಾಲುಗಳು ಕುರಿತು ತುಮಕೂರು ವಿವಿ ಸಮಾಜಕಾರ್ಯ ಅಧ್ಯಯನ ವಿಭಾಗದ ಪ್ರೊ.ಬಿ. ರಮೇಶ್ ಅವರು ವಿಶೇಷ ಉಪನ್ಯಾಸ ನೀಡಿದರು.

ಬೈಲುಕುಪ್ಪೆಯ ಸೆರಾಜೆ ಮೊನಾಸ್ಟಿಕ್ ವಿವಿ ಅನುವಾದ ವಿಭಾಗದ ನಿರ್ದೇಶಕರಾದ ಬಿಕ್ಕು ಲೋಬ್ ಸಂಗ್ ದೋರ್‌ಜಿ ಪಾಲ್ ಜೋರ್, ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ನಿರ್ದೇಶಕ ಡಾ.ಎಸ್. ನರೇಂದ್ರಕುಮಾರ್ ಇದ್ದರು.

15.10.2022 ಶನಿವಾರ
vishwavani.news
ವಿಶ್ವವಾಣಿ

# ಓದು, ಬರಹ ನಮ್ಮನ್ನು ಬೆಳೆಸುತ್ತದೆ



**ಮೈಸೂರು:** ಬುದ್ಧನ ಪ್ರಜ್ಞೆ, ಕರುಣೆ, ಸಮತೆ ನಮ್ಮೆಲ್ಲರ ಬದುಕಿನ ಭಾಗವಾಗಬೇಕು ಎಂದು ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಜಿ. ಹೇಮಂತ್ ಕುಮಾರ್ ಕಿವಿಮಾತು ಹೇಳಿದರು.

ಮಾನಸ ಗಂಗೋತ್ರಿಯ ಡಾ. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದಲ್ಲಿ ನಡೆದ 66ನೇ ಧಮ್ಮ ದೀಕ್ಷಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ಬುದ್ಧನ ಕರುಣೆ ತತ್ವಗಳನ್ನು ನಾವು ಜೀವಿಸುವ ಸ್ಥಳಗಳಲ್ಲಿ, ಕಾರ್ಯ ನಿರ್ವಹಿಸುವ ಜಾಗಗಳಲ್ಲಿ ಮತ್ತು ಸಂಚರಿಸುವ ಸ್ಥಳಗಳಲ್ಲಿ ಬಿತ್ತಬೇಕು. ಬುದ್ಧಗುರುವಿನ ತ್ರಿಸರಣ ತತ್ವವನ್ನು ಕಾಯಾ, ವಾಚಾ, ಮನಸಾ ಪಾಲಿಸೋಣ ಎಂಬ ಘೋಷಣೆಯನ್ನು ಕೈಗೊಳ್ಳೋಣ. ಅಂಬೇಡ್ಕರ್, ಬುದ್ಧಗುರುವನ್ನು ಕುರಿತು ಹೇಳಿದ ಮಾತು ಮನುಷ್ಯನ ಉತ್ಕೃಷ್ಟ ಮನೋಭಾವದಿಂದ ಹೊರಹೊಮ್ಮುವ ಪರಿಪೂರ್ಣ ನ್ಯಾಯವೇ ಬುದ್ಧನು ಬೋಧಿಸಿದ ಧಮ್ಮ ಎಂಬುದನ್ನು ಅರಿತು ಬಾಳೋಣ ಎಂದು ಹೇಳಿದರು.

ತುಮಕೂರು ವಿವಿ ಸಮಾಜಕಾರ್ಯ ಅಧ್ಯಯನ ವಿಭಾಗದ ಪ್ರೊ.ಬಿ.ರಮೇಶ್ ಅವರು, 66 ವರ್ಷಗಳ ಧಮ್ಮದೀಕ್ಷಾ ನಡಿಗೆಯ ಪ್ರಗತಿ ಮತ್ತು ಸವಾಲುಗಳು ಎಂಬ ವಿಷಯದ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು. ಬೈಲುಕುಪ್ಪೆ ಬಿಕ್ಕು ಲೋಬ್ ಸಂಗ್ ದೋರ್ ಜೆ ಪಾಲ್ ಜೋರ್, ಡಾ. ಎಸ್. ನರೇಂದ್ರಕುಮಾರ್ ಸೇರಿದಂತೆ ಇತರರು ಭಾಗವಹಿಸಿದ್ದರು.

ವಿಜಯ ಕರ್ನಾಟಕ VK

ಶನಿವಾರ,15 ಅಕ್ಟೋಬರ್ 2022

# ಯುದ್ಧ ಬೇಡ ಎಂಬ ಸಂದೇಶ ಜಗತ್ತಿನ ನಾಯಕರಿಗೆ ಅರ್ಥವಾಗಲಿ

**ವಿಕ ಸುದ್ದಿಲೋಕ** ಮೈಸೂರು

ಇಂದು ಎಲ್ಲರಿಗೂ ಬುದ್ಧನ ಮಾರ್ಗ ಬೇಕಿದೆ. ಜಗತ್ತಿಗೆ ಬುದ್ಧ ಬೇಕು, ಯುದ್ಧವಲ್ಲ ಎಂಬ ಕವಿಯ ಸಂದೇಶವನ್ನು ಇಂದು ಅಂತರರಾಷ್ಟ್ರೀಯ ನಾಯಕರು ಅರಿತುಕೊಳ್ಳಬೇಕಿದೆ ಎಂದು ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಜಿ. ಹೇಮಂತ್ ಕುಮಾರ್ ತಿಳಿಸಿದರು.

**ಧಮ್ಮದೀಕ್ಷಾ ದಿನಾಚರಣೆಯಲ್ಲಿ ಮೈಸೂರು ವಿವಿ ಕುಲಪತಿ ಪ್ರೊ.ಜಿ. ಹೇಮಂತ್ ಕುಮಾರ್ ಅಭಿಮತ**

ಮಾನಸ ಗಂಗೋತ್ರಿಯ ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದಲ್ಲಿ ನಡೆದ 66ನೇ ಧಮ್ಮದೀಕ್ಷಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ''ಯಾರು ಬುದ್ಧಗುರುವನ್ನು ಒಪ್ಪಿಕೊಳ್ಳುತ್ತಾರೋ ಅವರುಗಳು ಪರಿಶುದ್ಧರಾಗಿರುತ್ತಾರೆ. ಅವರಿಗೆ ಭಯ, ಆಂತರಿಕ ಅಪಜಯ ಇರುವುದಿಲ್ಲ. ಸತ್ಯವಂತರೆ ಬುದ್ಧಗುರುವಿನ ಅನುಯಾಯಿಗಳು. ದುರ್ಬುದ್ಧಿ ಉಳ್ಳವರು, ದುರಾಸೆ ಉಳ್ಳವರು, ಜಾತಿವಾದಿಗಳು ಇವರುಗಳಿಗೆ ಧಮ್ಮದಲ್ಲಿ ಸ್ಥಳವಿರುವುದಿಲ್ಲ. ಆದರೆ, ಧಮ್ಮ ಸ್ವೀಕರಿಸಿದ ಮೇಲೆ ದುರ್ಬುದ್ಧಿ ಉಳ್ಳವರಿಗೆ ತಮ್ಮ ತಪ್ಪಿನ ಅರಿವಾಗುತ್ತದೆ. ಹಾಗೆಯೇ ದುರಾಸೆ ಉಳ್ಳವರು ಧಮ್ಮ ಸ್ವೀಕರಿಸಿದರೆ, ಬದುಕಿನ ಸತ್ಯವನ್ನು ಕಂಡುಕೊಳ್ಳುತ್ತಾರೆ.



ಮೈಸೂರಿನಲ್ಲಿ ನಡೆದ 66ನೇ ಧಮ್ಮದೀಕ್ಷಾ ದಿನಾಚರಣೆಯಲ್ಲಿ ಮೈವಿವಿ ಕುಲಪತಿ ಪ್ರೊ.ಜಿ.ಹೇಮಂತ್ ಕುಮಾರ್ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಬೈಲುಕುಪ್ಪೆ ಬಿಕ್ಕು ಲೋಬ್‌ಸಂಗ್ ದೋರ್‌ಜಿ ಪಾಲ್‌ಜೋರ್, ಡಾ.ಎಸ್.ನರೇಂದ್ರಕುಮಾರ್, ತುಮಕೂರು ವಿವಿ ಸಮಾಜಕಾರ್ಯ ಅಧ್ಯಯನ ವಿಭಾಗದ ಪ್ರೊ.ಬಿ.ರಮೇಶ್ ಮತ್ತಿತರರು ಇದ್ದರು.

''ಇತ್ತೀಚೆಗೆ ಕೋಲಾರದಲ್ಲಿ ಒಬ್ಬ ಬಾಲಕ ದೇವರ ಗುಜ್ಜಕೋಲನ್ನು ಮುಟ್ಟಿದ ಎಂಬ ಕಾರಣಕ್ಕೆ ಹಲ್ಲೆ ನಡೆಸಿ ಬಹಿಷ್ಕಾರ ಹಾಕಿ ದಂಡ ವಿಧಿಸಿದಂತಹ ಘಟನೆಗಳು ನಮ್ಮ ಮುಂದೆ ಜೀವಂತವಾಗಿವೆ. ಸಮಾಜ ಕ್ರೌರ್ಯವನ್ನು ಬಿತ್ತದೆ ಕರುಣೆಯನ್ನು ನಾವು ಅಪ್ಪಿಕೊಳ್ಳಬೇಕು. ಅಂಬೇಡ್ಕರ್ ಬಯಸಿದ್ದು ಇಂತಹ ಕ್ರೌರ್ಯದ ಸಮಾಜವನ್ನಲ್ಲ. ಬದಲಿಗೆ ಕಾರುಣ್ಯ ಸಮಾಜವನ್ನು. ವಿಜಯದಶಮಿಯ ದಿನದಂದು ಅಶೋಕ ಮಹಾರಾಜ ಶಸಾಸ್ತ್ರವನ್ನು ತ್ಯಾಗ ಮಾಡಿ ಬೌದ್ಧಧಮವನ್ನು ಸ್ವೀಕರಿಸಿದನು. ಆ ಧರ್ಮವನ್ನು ಅಂತಾರಾಷ್ಟ್ರೀಯ ಧರ್ಮವನ್ನಾಗಿ ಮಾಡಿದ,'' ಎಂದು ಪ್ರೊ.ಜಿ. ಹೇಮಂತ್ ಕುಮಾರ್ ತಿಳಿಸಿದರು.

**ಕಾರುಣ್ಯ ಸಮಾಜ ನಿರ್ಮಾಣವಾಗಲಿ**

ಜಾತಿವಾದಿಗಳು ಧಮ್ಮಕ್ಕೆ ಶರಣಾದರೆ, ಮನುಷ್ಯರಾಗುತ್ತಾರೆ,'' ಎಂದು ತಿಳಿಸಿದರು.

''ಬುದ್ಧನ ಕರುಣೆ ತತ್ವಗಳನ್ನು ನಾವು ಜೀವಿಸುವ ಸ್ಥಳಗಳಲ್ಲಿ, ಕಾರ್ಯ ನಿರ್ವಹಿಸುವ ಜಾಗಗಳಲ್ಲಿ ಮತ್ತು ಸಂಚರಿಸುವ ಸ್ಥಳಗಳಲ್ಲಿ ಬಿತ್ತಬೇಕು. ಬುದ್ಧಗುರುವಿನ ತ್ರಿಸರಣ ತತ್ವವನ್ನು ಕಾಯಾ, ವಾಚಾ, ಮನಸಾ ಪಾಲಿಸೋಣ ಎಂಬ ಘೋಷಣೆಯನ್ನು ಕೈಗೊಳ್ಳೋಣ. ಅಂಬೇಡ್ಕರ್, ಬುದ್ಧಗುರುವನ್ನು ಕುರಿತು ಹೇಳಿದ ಮಾತು ''ಮನುಷ್ಯನ ಉತ್ಕೃಷ್ಟ ಮನೋಭಾವದಿಂದ ಹೊರಹೊಮ್ಮುವ ಪರಿಪೂರ್ಣ ನ್ಯಾಯವೇ ಬುದ್ಧನು ಬೋಧಿಸಿದ ಧಮ್ಮ'' ಎಂಬುದನ್ನು ಅರಿತು ಬಾಳೋಣ ಎಂದು ಹೇಳಿದರು.

''ಮೈಸೂರು ವಿಶ್ವವಿದ್ಯಾಲಯವು, ಬೈಲಕುಪ್ಪೆಯ ಸೆರಾಜೆ ಮೊನಾಸ್ಟಿಕ್ ವಿಶ್ವವಿದ್ಯಾಲಯದೊಂದಿಗೆ ಒಡಂಬಡಿಕೆಗಳನ್ನು ಇತ್ತೀಚೆಗೆ ಮಾಡಿಕೊಂಡಿದೆ. ಮೈಸೂರು ವಿಶ್ವವಿದ್ಯಾನಿಲಯವು ಬೌದ್ಧ ಅಧ್ಯಯನದಲ್ಲಿ ಒಂದು ವಿಶೇಷ ಸ್ಥಾನವನ್ನು ಪಡೆದುಕೊಳ್ಳಲು ಶ್ರಮಿಸುತ್ತಿದೆ.

P»II

## ಯುದ್ಧ ಬೇಡ ಎಂಬ ಸಂದೇಶ ಜಗತ್ತಿನ ನಾಯಕರಿಗೆ ಅರ್ಥವಾಗಲಿ

» ನಮ್ಮ ಮೊದಲ ಪುಟದಿಂದ

ನಾವೆಲ್ಲರೂ ಇಲ್ಲಿ, ಅರಿಯಬೇಕಾದ ವಿಷಯವೆಂದರೆ ಓದು, ಬರಹ ನಮ್ಮನ್ನು ಬೆಳೆಸುತ್ತದೆ, ಉಳಿಸುತ್ತದೆ. ಚರಿತ್ರೆಯ ನಿರ್ಮಾಣವನ್ನು ಮಾಡುತ್ತದೆ. ಬಾಬಾಸಾಹೇಬರ ಜೀವನವೇ ಇದಕ್ಕೆ ಸಾಕ್ಷಿಯಾಗಿದೆ. ಯಾರಿಗೆ ಸ್ವಾಭಿಮಾನದ ಬದುಕು ಬೇಕೋ ಅವರು ಬುದ್ದವನ್ನು ಅಪ್ಪಿಕೊಳ್ಳಬೇಕು. ಬುದ್ಧನ ಚಿಂತನೆಗಳನ್ನು, ಮಾರ್ಗಗಳನ್ನು ಇಂದಿನ ಯುವ ಪೀಳಿಗೆಗೆ ಅರ್ಥೈಸುವ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ,''ಎಂದರು. ತುಮಕೂರು ವಿವಿ ಸಮಾಜಕಾರ್ಯ ಅಧ್ಯಯನ ವಿಭಾಗದ ಪ್ರೊ.ಬಿ.ರಮೇಶ್ ಅವರು, ''66 ವರ್ಷಗಳ ಧಮ್ಮದೀಕ್ಷಾ ನಡಿಗೆಯ ಪ್ರಗತಿ ಮತ್ತು ಸವಾಲುಗಳು'' ಎಂಬ ವಿಷಯದ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು. ಬೈಲಕುಪ್ಪೆ ಬಿಕ್ಕು ಲೋಬ್‌ಸಂಗ್ ದೋರ್‌ಜಿ ಪಾಲ್‌ಜೋರ್, ಡಾ.ಎಸ್.ನರೇಂದ್ರಕುಮಾರ್ ಮತ್ತಿತರರು ಭಾಗವಹಿಸಿದ್ದರು.

ಶನಿವಾರ
15 ಅಕ್ಟೋಬರ್ 2022

ಹೊಸ ದಿಗಂತ

# ಮೈಸೂರು

ಧಮ್ಮದೀಕ್ಷಾ ದಿನಾಚರಣೆಯಲ್ಲಿ ಕುಲಪತಿ ಪ್ರೊ.ಜಿ.ಹೇಮಂತ್ ಕುಮಾರ್ ಇಂಗಿತ

## ದೇಶಕ್ಕೆ ಬುದ್ಧನ ಮಾರ್ಗ ಅಗತ್ಯ

**ಮೈಸೂರು:** ನಮ್ಮ ದೇಶಕ್ಕೆ ಈಗ ಬುದ್ಧನ ಮಾರ್ಗ ಬೇಕಾಗಿದೆ. ಆ ಮಾರ್ಗಗಳನ್ನು ಇಂದಿನ ಯುವ ಪೀಳಿಗೆಗೆ ಅರ್ಥೈಸುವ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಜಿ. ಹೇಮಂತ್ ಕುಮಾರ್ ಹೇಳಿದರು.

ಶುಕ್ರವಾರ ನಗರದ ಮಾನಸ ಗಂಗೋತ್ರಿಯ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದಲ್ಲಿ ನಡೆದ 66ನೇ ಧಮ್ಮದೀಕ್ಷಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ಯಾರು ಬುದ್ಧನನ್ನು ಗುರುವಾಗಿ ಒಪ್ಪಿಕೊಳ್ಳುತ್ತಾರೋ, ಅಂತಹವರು ಪರಿಶುದ್ಧರಾಗಿರುತ್ತಾರೆ. ಅವರಿಗೆ ಭಯ, ಆಂತರಿಕ ಅಪಜಯ ಇರುವುದಿಲ್ಲ ಎಂದರು.

ಸತ್ಯವಂತರೆ ಬುದ್ಧನ ಅನುಯಾಯಿಗಳು. ದುರ್ಬುದ್ಧಿ ಉಳ್ಳವರು, ದುರಾಸೆ ಉಳ್ಳವರು, ಜಾತಿವಾದಿಗಳು. ಇವರುಗಳಿಗೆ ಧಮ್ಮದಲ್ಲಿ ಸ್ಥಳವಿರುವುದಿಲ್ಲ. ಆದರೆ, ಧಮ್ಮ ಸ್ವೀಕರಿಸಿದ ಮೇಲೆ ದುರ್ಬುದ್ಧಿ ಉಳ್ಳವರಿಗೆ ತಮ್ಮ ತಪ್ಪಿನ ಅರಿವಾಗುತ್ತದೆ. ಹಾಗೆಯೇ ದುರಾಸೆ ಉಳ್ಳವರು ಧಮ್ಮ ಸ್ವೀಕರಿಸಿದರೆ, ಬದುಕಿನ ಸತ್ಯವನ್ನು ಕಂಡುಕೊಳ್ಳುತ್ತಾರೆ. ಜಾತಿವಾದಿಗಳು ಧಮ್ಮಕ್ಕೆ ಶರಣಾದರೆ, ಮನುಷ್ಯರಾಗುತ್ತಾರೆ. ಇಂದು ಈ ದೇಶಕ್ಕೆ ಬುದ್ಧನ ಮಾರ್ಗ ಬೇಕಿದೆ. ಜಗತ್ತಿಗೆ ಬುದ್ಧ ಬೇಕು, ಯುದ್ಧವಲ್ಲ ಎಂಬ ಕವಿಯ ಸಂದೇಶವನ್ನು ಇಂದು ಅಂತರರಾಷ್ಟ್ರೀಯ ನಾಯಕರು ಅರಿತುಕೊಳ್ಳಬೇಕಿದೆ ಎಂದರು.

ಬುದ್ಧನ ಪ್ರಜ್ಞೆ, ಕರುಣೆ, ಸಮತೆ ನಮ್ಮೆಲ್ಲರ ಬದುಕಿನ ಭಾಗವಾಗಬೇಕು. ''ಬುದ್ಧನ ಕರುಣೆ ತತ್ವಗಳನ್ನು ನಾವು ಜೀವಿಸುವ ಸ್ಥಳಗಳಲ್ಲಿ, ಕಾರ್ಯ ನಿರ್ವಹಿಸುವ ಜಾಗಗಳಲ್ಲಿ ಮತ್ತು ಸಂಚರಿಸುವ ಸ್ಥಳಗಳಲ್ಲಿ ಬಿತ್ತಬೇಕು. ಬುದ್ಧಗುರುವಿನ ತ್ರಿಸರಣ ತತ್ವವನ್ನು ಕಾಯಾ, ವಾಚಾ, ಮನಸಾ ಪಾಲಿಸೋಣ ಎಂಬ ಘೋಷಣೆಯನ್ನು ಕೈಗೊಳ್ಳೋಣ. ಅಂಬೇಡ್ಕರ್, ಬುದ್ಧನನ್ನು ಕುರಿತು ಹೇಳಿದ ಮಾತು ''ಮನುಷ್ಯನ ಉತ್ಕೃಷ್ಟ ಮನೋಭಾವದಿಂದ ಹೊರಹೊಮ್ಮುವ ಪರಿಪೂರ್ಣ ನ್ಯಾಯವೇ ಬುದ್ಧನು ಬೋಧಿಸಿದ ಧಮ್ಮ'' ಎಂಬುದನ್ನು ಅರಿತು ಬಾಳೋಣ ಎಂದು ಕಿವಿ ಮಾತು ಹೇಳಿದರು.



### ಬೇಕಿದೆ ಸ್ವಾಭಿಮಾನದ ಬದುಕು

**ಮೈಸೂರು ವಿಶ್ವವಿದ್ಯಾನಿಲಯವು ಬೌದ್ಧ ಅಧ್ಯಯನದಲ್ಲಿ ಒಂದು ವಿಶೇಷ ಸ್ಥಾನವನ್ನು ಪಡೆದುಕೊಳ್ಳಲು ಶ್ರಮಿಸುತ್ತಿದೆ ಎಂದು ತಿಳಿಸಿದರು. ಓದು, ಬರಹ ನಮ್ಮನ್ನು ಬೆಳೆಸುತ್ತದೆ, ಉಳಿಸುತ್ತದೆ. ಚರಿತ್ರೆಯ ನಿರ್ಮಾಣವನ್ನು ಮಾಡುತ್ತದೆ. ಇದಕ್ಕೆ ಡಾ.ಬಿ.ಆರ್.ಅಂಬೇಡ್ಕರ್‌ರ ಜೀವನವೇ ಇದಕ್ಕೆ ಸಾಕ್ಷಿಯಾಗಿದೆ. ಯಾರಿಗೆ ಸ್ವಾಭಿಮಾನದ ಬದುಕು ಬೇಕೋ ಅವರು ಬುದ್ಧವನ್ನು ಅಪ್ಪಿಕೊಳ್ಳಬೇಕು.**

ಮೈಸೂರು ವಿಶ್ವವಿದ್ಯಾನಿಲಯವು, ಬೈಲಕುಪ್ಪೆಯ ಸೆರಾಜೆ ಮೊನಾಸ್ಟಿಕ್ ವಿಶ್ವವಿದ್ಯಾಲಯದೊಂದಿಗೆ ಒಡಂಬಡಿಕೆಗಳನ್ನು ಇತ್ತೀಚೆಗೆ ಮಾಡಿಕೊಂಡಿದೆ. ಮೈಸೂರು ವಿಶ್ವವಿದ್ಯಾನಿಲಯವು ಬೌದ್ಧ ಅಧ್ಯಯನದಲ್ಲಿ ಒಂದು ವಿಶೇಷ ಸ್ಥಾನವನ್ನು ಪಡೆದುಕೊಳ್ಳಲು ಶ್ರಮಿಸುತ್ತಿದೆ ಎಂದು ತಿಳಿಸಿದರು. ಓದು, ಬರಹ ನಮ್ಮನ್ನು ಬೆಳೆಸುತ್ತದೆ, ಉಳಿಸುತ್ತದೆ. ಚರಿತ್ರೆಯ ನಿರ್ಮಾಣವನ್ನು ಮಾಡುತ್ತದೆ. ಇದಕ್ಕೆ ಡಾ.ಬಿ.ಆರ್.ಅಂಬೇಡ್ಕರ್‌ರ ಜೀವನವೇ ಇದಕ್ಕೆ ಸಾಕ್ಷಿಯಾಗಿದೆ. ಯಾರಿಗೆ ಸ್ವಾಭಿಮಾನದ ಬದುಕು ಬೇಕೋ ಅವರು ಬುದ್ಧವನ್ನು ಅಪ್ಪಿಕೊಳ್ಳಬೇಕು. ಬುದ್ಧನ ಚಿಂತನೆಗಳನ್ನು, ಮಾರ್ಗಗಳನ್ನು ಇಂದಿನ ಯುವ ಪೀಳಿಗೆಗೆ ಅರ್ಥೈಸುವ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ ಎಂದರು.

ತುಮಕೂರು ವಿವಿ ಸಮಾಜಕಾರ್ಯ ಅಧ್ಯಯನ ವಿಭಾಗದ ಪ್ರೊ.ಬಿ.ರಮೇಶ್ ಅವರು, ''66 ವರ್ಷಗಳ ಧಮ್ಮದೀಕ್ಷಾ ನಡಿಗೆಯ ಪ್ರಗತಿ ಮತ್ತು ಸವಾಲುಗಳು ಎಂಬ ವಿಷಯದ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಬೈಲುಕುಪ್ಪೆ ಬಿಕ್ಕು ಲೋಬ್ ಸಂಗ್ ದೋರ್ ಜಿ ಪಾಲ್ ಜೋರ್, ಡಾ.ಎಸ್. ನರೇಂದ್ರಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಶನಿವಾರ, 15 ಅಕ್ಟೋಬರ್ 2022 ಆಂದೋಲನ

# 'ಆಧುನಿಕ ಭಾರತದ ನೇತಾರ ಡಾ.ಬಿ.ಆರ್.ಅಂಬೇಡ್ಕರ್'

## 66ನೇ ಧಮ್ಮದೀಕ್ಷಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿದ ಪ್ರೊ.ಜಿ.ಹೇಮಂತ್ ಕುಮಾರ್ ಬಣ್ಣನೆ

ಮೈಸೂರು: ಡಾ.ಬಿ.ಆರ್.ಅಂಬೇಡ್ಕರ್ ಅವರು 'ಹಿಂದೂವಾಗಿ ಹುಟ್ಟಿದ್ದೇನೆ, ಹಿಂದೂವಾಗಿ ಸಾಯಲಾರೆ' ಎಂಬ ನಿರ್ಧಾರಕ್ಕೆ ಬರಲು ಈ ಸಮಾಜವೇ ಕಾರಣವಾಗಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ಜಿ.ಹೇಮಂತ್ ಕುಮಾರ್ ಬೇಸರ ವ್ಯಕ್ತಪಡಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರದ ವತಿಯಿಂದ ಕೇಂದ್ರದ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ '66ನೇ ಧಮ್ಮದೀಕ್ಷಾ ದಿನಾಚರಣೆ' ಕಾರ್ಯಕ್ರಮವನ್ನು ಗಿಡಕ್ಕೆ ನೀರು ಹಾಕುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ವಿಶ್ವಕ್ಕೆ ಜ್ಞಾನಿಯಾದವರು ಬೋಧಿಸತ್ವ ಡಾ.ಅಂಬೇಡ್ಕರ್‌ರವರು. ತಾವಿದ್ದ ಸಮಾಜವನ್ನು ವಿವೇಚನಾಭರಿತವಾಗಿ ವಿಮರ್ಶಿಸಿದ ಅವರು ಭಾರತವನ್ನು ಬಾಹ್ಯವಾಗಿ ಮತ್ತು ಆಂತರಿಕವಾಗಿ ಸ್ವಾತಂತ್ರ್ಯವನ್ನಾಗಿಸಲು ಪಣತೊಟ್ಟ ಧೀಮಂತ ನಾಯಕ. ಅಕ್ಷರದಿಂದ ವಂಚಿತರಾದವರನ್ನು ಅಕ್ಷರದೆಡೆಗೆ, ಅಧಿಕಾರದಿಂದ ವಂಚಿತರಾದವರನ್ನು ಅಧಿಕಾರದೆಡೆಗೆ, ಸಂಕೋಲೆಯ ಬದುಕಿನಲ್ಲಿದ್ದವರನ್ನು ಸ್ವಾಭಿಮಾನದ ಬದುಕಿನೆಡೆಗೆ ಕರೆತಂದ ಆಧುನಿಕ ಭಾರತದ ನೇತಾರ ಎಂದು ಬಣ್ಣಿಸಿದರು.



ಮೈಸೂರು ವಿಶ್ವವಿದ್ಯಾನಿಲಯದ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರದ ವತಿಯಿಂದ ಕೇಂದ್ರದ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ 66ನೇ ಧಮ್ಮದೀಕ್ಷಾ ದಿನಾಚರಣೆ ಕಾರ್ಯಕ್ರಮವನ್ನು ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ಜಿ.ಹೇಮಂತ್ ಕುಮಾರ್ ಉದ್ಘಾಟಿಸಿದರು. ಪ್ರೊ.ಬಿ.ರಮೇಶ್, ಬಿಕ್ಕು ಲೋಬ್ ಸಂಗ್ ದೋರ್‌ಜಿ ಪಾಲ್ ಜೋರ್, ಡಾ.ಎಸ್.ನರೇಂದ್ರಕುಮಾರ್ ಹಾಜರಿದ್ದರು.

> ಅಂಬೇಡ್ಕರ್ ಅವರು ಶೈಕ್ಷಣಿಕ ಕ್ರಾಂತಿಯ ಮೂಲಕ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಕಾಂತ್ರಿಗಳನ್ನು ಮಾಡುವುದರ ಜೊತೆಗೆ ಧಾರ್ಮಿಕ ಕ್ರಾಂತಿಯನ್ನೂ ಬುದ್ಧ ಧಮ್ಮದಿಂದ ಮಾಡಿದ್ದಾರೆ. ದೇಶಕ್ಕೆ ಕಳಂಕವಾಗಿರುವ ಜಾತಿ ಮತ್ತು ಅಸ್ಪೃಶ್ಯತೆಗಳ ವಿರುದ್ಧ ಬೌದ್ಧಿಕ ಸಮರ ಮತ್ತು ಸಾಮಾಜಿಕ, ರಾಜಕೀಯ ಸಮರವನ್ನು ಕೈಗೊಂಡು ನಾಗರಿಕ ಸಮಾಜವನ್ನು ಕಟ್ಟಿದ್ದಾರೆ.
>
> -ಪ್ರೊ.ಜಿ.ಹೇಮಂತ್ ಕುಮಾರ್

'66 ವರ್ಷಗಳ ಧಮ್ಮದೀಕ್ಷಾ ನಡಿಗೆಯ ಪ್ರಗತಿ ಮತ್ತು ಸವಾಲುಗಳು' ವಿಷಯ ಕುರಿತು ತುಮಕೂರು ವಿಶ್ವವಿದ್ಯಾನಿಲಯ ಸಮಾಜಕಾರ್ಯ ಅಧ್ಯಯನ ಮತ್ತು ಸಂಶೋಧನ ವಿಭಾಗದ ಪ್ರಾಧ್ಯಾಪಕ ಪ್ರೊ.ಬಿ.ರಮೇಶ್ ಮಾತನಾಡಿ, ಪ್ರಸ್ತುತ ಸಂಸತ್, ವಿಧಾನ ಸೌಧ, ಸರ್ಕಾರಿ ಕಚೇರಿಗಳು, ಪಕ್ಷದ ಕಚೇರಿಗಳು, ಬೇರೆ ಬೇರೆ ದೇಶಗಳೂ ಸೇರಿದಂತೆ ಅನೇಕ ಕಡೆ ಅಂಬೇಡ್ಕರ್ ಅವರ ಪ್ರತಿಮೆಗಳು ನಿರ್ಮಾಣವಾಗುತ್ತಿವೆ. ಇದು ಅಂಬೇಡ್ಕರ್ ಮೇಲಿನ ಅಭಿಮಾನ ಅಥವಾ ಪ್ರೀತಿಯೂ ಇರಬಹುದು. ಆದರೆ, ಇದುವರೆಗೂ ಅವರ ತಾತ್ವಿಕ ಚಿಂತನೆಗಳನ್ನು ಬಹುತೇಕರು ಒಪ್ಪಿಕೊಂಡಿಲ್ಲ. ಹಾಗೇನಾದರೂ, ಅಂಬೇಡ್ಕರ್ ಅವರ ಚಿಂತನೆಗಳನ್ನು ಅಳವಡಿಸಿಕೊಂಡಿದ್ದರೆ, ಈ ವೇಳೆಗೆ 40 ಕೋಟಿ ಜನರು ಬೌದ್ಧ ಧರ್ಮಕ್ಕೆ ಬರಬೇಕಿತ್ತು. ಅವರ ತಾತ್ವಿಕ ಚಿಂತನೆಗಳನ್ನು ಒಪ್ಪದೇ ಇರುವ ಕಾರಣ ಅವರು ಇನ್ನು ಪ್ರತಿಮೆಯಾಗಿಯೇ ಉಳಿದಿದ್ದಾರೆ ಎಂದು ಬೇಸರಿಸಿದರು.

ಬೈಲುಕುಪ್ಪೆಯ ಸೆರಾಜೆ ಮೊನಾಸ್ಟಿಕ್ ವಿಶ್ವವಿದ್ಯಾನಿಲಯದ ನಿರ್ದೇಶಕ ಬಿಕ್ಕು ಲೋಬ್ ಸಂಗ್ ದೋರ್‌ಜಿ ಪಾಲ್ ಜೋರ್, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರದ ನಿರ್ದೇಶಕ ಡಾ.ಎಸ್.ನರೇಂದ್ರಕುಮಾರ್, ಪ್ರಾಧ್ಯಾಪಕರಾದ ಜೆ.ಸೋಮಶೇಖರ್, ಪ್ರೊ.ಇಂದಿರಾ, ಪ್ರೊ.ಜಯಶಂಕರ್, ಪ್ರೊ.ತಿಮ್ಮರಾಯಪ್ಪ, ಪ್ರೊ.ಬಸವರಾಜು, ಪ್ರೊ.ಪುಟ್ಟಮಾದಯ್ಯ ಇತರರು ಹಾಜರಿದ್ದರು.

ಶನಿವಾರ • ಅಕ್ಟೋಬರ್ 15, 2022 ಪ್ರಜಾವಾಣಿ

# ದೇಶಕ್ಕೆ ಬುದ್ಧನ ಮಾರ್ಗ ಅಗತ್ಯ

## ಧಮ್ಮದೀಕ್ಷೆ ದಿನಾಚರಣೆಯಲ್ಲಿ ಕುಲಪತಿ ಪ್ರೊ. ಹೇಮಂತ್ ಕುಮಾರ್

ಪ್ರಜಾವಾಣಿ ವಾರ್ತೆ



ಶುಕ್ರವಾರ ನಡೆದ '66ನೇ ಧಮ್ಮದೀಕ್ಷೆ ದಿನಾಚರಣೆ' ಕಾರ್ಯಕ್ರಮದಲ್ಲಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಡಾ.ಬಿ.ಆರ್‌.ಅಂಬೇಡ್ಕರ್ ಫೋಟೊ ಹಾಗೂ ಬುದ್ಧನ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿದರು. ಬಿಕ್ಕು ಲೋಬ್‌ಸಂಗ್ ದೋರ್‌ಜಿ ಪಾಲ್‌ಜೋರ್, ಪ್ರೊ.ಬಿ.ರಮೇಶ್ ಹಾಗೂ ಡಾ.ಎಸ್‌.ನರೇಂದ್ರ ಕುಮಾರ್ ಇದ್ದಾರೆ

**ಮೈಸೂರು:** 'ದೇಶಕ್ಕೆ ಬುದ್ಧನ ಮಾರ್ಗದ ಅಗತ್ಯವಿದೆ' ಎಂದು ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಜಿ.ಹೇಮಂತ್ ಕುಮಾರ್ ಅಭಿಪ್ರಾಯ ವ್ಯಕ್ತಪಡಿಸಿದರು.

ಮಾನಸ ಗಂಗೋತ್ರಿಯ ಡಾ.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣ ಕೇಂದ್ರದಲ್ಲಿ ಶುಕ್ರವಾರ ನಡೆದ '66ನೇ ಧಮ್ಮದೀಕ್ಷಾ ದಿನಾಚರಣೆ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ಬುದ್ಧ ಜಗತ್ತಿನ ಬೆಳಕು. ಆ ಗುರುವನ್ನು ಒಪ್ಪುವವರು ಪರಿಶುದ್ಧವಾಗುತ್ತಾರೆ. ಅವರಿಗೆ ಭಯ, ಆಂತರಿಕ ಅಪಜಯ ಇರುವುದಿಲ್ಲ. ಅವನ ಪ್ರಜ್ಞೆ, ಕರುಣೆ, ಸಮತೆ ನಮ್ಮೆಲ್ಲರ ಬದುಕಿನ ಭಾಗವಾಗಬೇಕು' ಎಂದು ಆಶಿಸಿದರು.

**ಅರಿತು ಬಾಳೋಣ:** 'ನಾವು ಜೀವಿಸುವ, ಕಾರ್ಯನಿರ್ವಹಿಸುವ ಹಾಗೂ ಸಂಚರಿಸುವ ಸ್ಥಳಗಳಲ್ಲಿ ಬುದ್ಧನ ಕರುಣೆಯನ್ನು ಬಿತ್ತಬೇಕು. ಮನುಷ್ಯನ ಉತ್ಕೃಷ್ಟ ಮನೋಭಾವದಿಂದ ಹೊರಹೊಮ್ಮುವ ಪರಿಪೂರ್ಣ ನ್ಯಾಯವೇ ಬುದ್ಧನು ಬೋಧಿಸಿದ ಧಮ್ಮ ಎಂಬ ಅಂಬೇಡ್ಕರ್ ಮಾತುಗಳನ್ನು ಅರಿತು ಬಾಳೋಣ' ಎಂದರು.

'ಮೈಸೂರು ವಿಶ್ವವಿದ್ಯಾಲಯವು ಬೈಲಕುಪ್ಪೆಯ ಸೆರಾಜೆ ಮೊನಾಸ್ಟಿಕ್ ವಿಶ್ವವಿದ್ಯಾಲಯದೊಂದಿಗೆ ಒಡಂಬಡಿಕೆ ಮಾಡಿಕೊಂಡಿದೆ. ಬುದ್ಧ ಅಧ್ಯಯನ ಕೇಂದ್ರದ ಚಟುವಟಿಕೆಗಳು ಆರಂಭವಾಗಿದ್ದು, ಕೇಂದ್ರಕ್ಕೆ ₹ 10 ಕೋಟಿ ವಿಶೇಷ ಅನುದಾನ ಒದಗಿಸುವಂತೆ ಸಂಸದ ವಿ.ಶ್ರೀನಿವಾಸಪ್ರಸಾದ್ ಈಚೆಗೆ ಮೈಸೂರಿಗೆ ಭೇಟಿ ನೀಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿ ಸಲ್ಲಿಸಿದ್ದಾರೆ. ಮುಂದಿನ ದಿನಗಳಲ್ಲಿ ಬೌದ್ಧ ಅಧ್ಯಯನದಲ್ಲಿ ಮೈಸೂರು ವಿಶ್ವವಿದ್ಯಾಲಯವು ವಿಶೇಷ ಸ್ಥಾನವನ್ನು ಪಡೆದುಕೊಳ್ಳಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

**ಈ ಸಮಾಜವೇ ಕಾರಣ:** 'ಹಿಂದೂ ಆಗಿ ಜನಿಸಿದೆ. ಆದರೆ, ಹಿಂದೂ ಆಗಿ ಸಾಯಲಾರೆ ಎಂದು ಅಂಬೇಡ್ಕರ್ ಹೇಳಿದ್ದಕ್ಕೆ ಈ ಸಮಾಜವೇ ಕಾರಣ. ಯಾರಿಗೆ ಸ್ವಾಭಿಮಾನದ ಬದುಕು ಬೇಕೋ ಅವರು ಬುದ್ಧನನ್ನು ಅಪ್ಪಿಕೊಳ್ಳಬೇಕು. ಆತನ ಚಿಂತನೆಗಳು, ಮಾರ್ಗಗಳನ್ನು ಇಂದಿನ ಯುವ ಪೀಳಿಗೆಗೆ ಅರ್ಥೈಸುವ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ' ಎಂದು ತಿಳಿಸಿದರು.

'ದುರ್ಬುದ್ಧಿ, ದುರಾಸೆ ಉಳ್ಳವರು ಮತ್ತು ಜಾತಿವಾದಿಗಳಿಗೆ ಧಮ್ಮದಲ್ಲಿ ಸ್ಥಳವಿರುವುದಿಲ್ಲ. ಆದರೆ, ಧಮ್ಮ ಸ್ವೀಕರಿಸಿದ ಮೇಲೆ ದುರ್ಬುದ್ಧಿ ಉಳ್ಳವರಿಗೆ ತಮ್ಮ ತಪ್ಪಿನ ಅರಿವಾಗುತ್ತದೆ. ದುರಾಸೆ ಉಳ್ಳವರು ಬದುಕಿನ ಸತ್ಯವನ್ನು ಕಂಡುಕೊಳ್ಳುತ್ತಾರೆ. ಜಾತಿವಾದಿಗಳು ಧಮ್ಮಕ್ಕೆ ಶರಣಾದರೆ ಮನುಷ್ಯರಾಗುತ್ತಾರೆ' ಎಂದು ಹೇಳಿದರು.

> ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳಾದರೂ ಅಸ್ಪೃಶ್ಯತೆ, ಜಾತಿ ದೌರ್ಜನ್ಯ ಇಂದಿಗೂ ಕೊನೆಯಾಗಿಲ್ಲ
>
> **ಪ್ರೊ.ಜಿ.ಹೇಮಂತ್ ಕುಮಾರ್,**
> ಕುಲಪತಿ, ಮೈಸೂರು ವಿಶ್ವವಿದ್ಯಾಲಯ

ತುಮಕೂರು ವಿಶ್ವವಿದ್ಯಾಲಯದ ಸಮಾಜ ಕಾರ್ಯ ಅಧ್ಯಯನ ಹಾಗೂ ಸಂಶೋಧನಾ ವಿಭಾಗದ ಪ್ರೊ.ಬಿ.ರಮೇಶ್ '66 ವರ್ಷಗಳ ಧಮ್ಮದೀಕ್ಷಾ ನಡಿಗೆಯ ಪ್ರಗತಿ ಮತ್ತು ಸವಾಲುಗಳು' ವಿಷಯ ಕುರಿತು ಮಾತನಾಡಿದರು.

ಬೈಲುಕುಪ್ಪೆಯ ಸೆರಾಜೆ ಮೊನಾಸ್ಟಿಕ್ ವಿಶ್ವವಿದ್ಯಾಲಯದ ಅನುವಾದ ವಿಭಾಗದ ನಿರ್ದೇಶಕ, ಬಿಕ್ಕು ಲೋಬ್‌ಸಂಗ್ ದೋರ್‌ಜಿ ಪಾಲ್‌ಜೋರ್ ಅಧ್ಯಕ್ಷತೆ ವಹಿಸಿದ್ದರು.

ನವೀನ್‌ಕುಮಾರ್ ಬುದ್ಧ ವಂದನೆ ಸಲ್ಲಿಸಿದರು. ಡಾ.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣ ಕೇಂದ್ರದ ನಿರ್ದೇಶಕ ಡಾ.ಎಸ್. ನರೇಂದ್ರಕುಮಾರ್ ಸ್ವಾಗತಿಸಿದರು.